email sent to.
BBMP council2015@gmail.com
in PDF format.
on :. 06/04/2021.

# ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,**
**ವಾರ್ಡ್ ನಂ.72, ಹೇರೋಹಳ್ಳಿ, ಬೆಂಗಳೂರು-5600 91.**

---

ಸಂಖ್ಯೆ: .ಸ.ಕಾ.ನಿ.ಅ: ಹೇ.ಉ.ವಿ: ಪಿಆರ್/ 12 /2020-21 ದಿನಾಂಕ : 03-04-2021

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.72ರಲ್ಲಿ ದಿನಾಂಕ: 03.04.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಹಾಜಾರಾಗಿದ್ದವರ ವಿವರಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 01 | ಶ್ರೀ. ಎಸ್ ಆರ್ ಪ್ರಕಾಶ್ | ವಾರ್ಡ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಿತ್ತಯ್ಯ | ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ ವಾರ್ಡ.72 ಹೇರೋಹಳ್ಳಿ |
| 03 | ಶ್ರೀ ಗೋವಿಂದಯ್ಯ | ಬೆಸ್ಕಾಂ ಅಧಿಕಾರಿಗಳು |
| 04 | ಶ್ರೀ ಹನುಮಂತರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 05 | ಶ್ರೀ ಶ್ರೀನಿವಾಸಯ್ಯ | ಸಹ ಕಂದಾಯ ಅಧಿಕಾರಿ, ಹೇರೋಹಳ್ಳಿ |
| 06 | ಶ್ರೀ ಸಂದೀಪ್ ಕೆ | ಎಲ್ & ಟಿ |
| 07 | ಶ್ರೀ ಅಮರನಾಥ | ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ |
| 08 | ಡಾ॥ ವಿವೇಕ್ | ಸರ್ಕಾರಿ ಆಸ್ಪತ್ರೆ ವೈದ್ಯರು, ಹೇರೋಹಳ್ಳಿ |
| 09 | ಶ್ರೀ ಶ್ರೀನಿವಾಸ್ | ಪೋಲೀಸ್ |
| 10 | ಶ್ರೀ ಪವನಕುಮಾರ್ | ಎಲ್ & ಟಿ |
| 11 | ಶ್ರೀ ಮುತ್ತಪ್ಪ | ಸ್ಥಳೀಯ ನಿವಾಸಿಗಳು |
| 12 | ಶ್ರೀ ಸಿ.ಟಿ.ನರಸೇಗೌಡ | ಸ್ಥಳೀಯ ನಿವಾಸಿಗಳು |
| 13 | ಶ್ರೀ ನಿಖಿಲ್ ಗೌಡ | ಸದಸ್ಯರು |
| 14 | ಶ್ರೀ ರಮೇಶ್ | ಯು.ಜಿ.ಡಿ |
| 15 | ಶ್ರೀನಿವಾಸ್ | ಮಾರ್ಷಲ್ |

ವಾರ್ಡ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ಎಸ್ ಆರ್ ಪ್ರಕಾಶ್ ರವರು ಮತ್ತು ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಚಿತ್ತಯ್ಯ ರವರು ಸಭೆಗೆ ಹಾಜರಿದ್ದು ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ ಸಮಿತಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯಗಳ ಬಗ್ಗೆ ತಿಳಿಸಿದರು.

ದಿನಾಂಕ 03/04/2021 ರಂದು ನಡೆದ ಸಭೆಯ ನಡುವಳಿಯನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಸಲು ಸಭೆಯಲ್ಲಿ ತಿಳಿಸಿರುತ್ತಾರೆ.

**ಆರೋಗ್ಯ ಇಲಾಖೆ ವೈದ್ಯಾಧಿಕಾರಿಗಳಿಗೆ:-**

- ಮೊದಲಿಗೆ ಅಧ್ಯಕ್ಷರು ಮಾತನಾಡುತ್ತಾ, ಸಭೆಯಲ್ಲಿ ಆಧಿಕಾರಿಗಳು ಸಭೆಗೆ ಹಾಜರಾಗದೇ ಇದ್ದು, ಸಾರ್ವಜನಿಕರ ಕುಂದು ಕೊರತೆಗಳ ಅಹವಾಲುಗಳನ್ನು ಸ್ವೀಕರಿಸಲು ಗೈರುಹಾಜರಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ, ಇದರ ಬಗ್ಗೆ ಮೆಲಾಧಿಕಾರಿಗಳ ಗಮನಕ್ಕೆ ತರಲಾಗಿದೆ.

1) ಡಾ|| ವಿವೇಕ್ ಆರೋಗ್ಯ ವೈದ್ಯಾಧಿಕಾರಿಗಳು ಹೇರೋಹಳ್ಳಿ ಸರ್ಕಾರಿ ಆಸ್ಪತ್ರೆಯ ವತಿಯಿಂದ ಸಭೆಯಲ್ಲಿ ಮಾತನಾಡಿ ವಾರ್ಡ ನಂ.72 ಹೇರೋಹಳ್ಳಿ ವ್ಯಾಪ್ತಿಯಲ್ಲಿ ಪ್ರತಿ ದಿನ 250 ರಿಂದ 300 ಜನರಿಗೆ 3 ವಿಭಾಗದಲ್ಲಿ ವ್ಯಾಕ್ಸೀನ್ ನೀಡಲಾಗಿದೆ. ಒಟ್ಟು 1450 ಜನರಿಗೆ ಈ ವಾರ್ಡ್ ಮಟ್ಟದಲ್ಲಿ ವಾಕ್ಸಿನ್ ಹಾಕಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

**<u>ಘನತ್ಯಾಜ್ಯ ನಿರ್ವಹಣೆ:</u>**

1) ಅಧ್ಯಕ್ಷರು ಮಾತನಾಡಿ ಪೌರ ಕಾರ್ಮಿಕರುಗಳಿಗೆ ಪಿ.ಎಫ್ ಸೌಲಭ್ಯ ನೀಡಲು ಪಟ್ಟಿ ಮಾಡಿ ಬಟಾವಾಡಿ ಅಧಿಕಾರಿಗಳಿಗೆ ಲಿಖಿತವಾಗಿ ವಿವರ ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು. ಮತ್ತು ಪೌರಕಾರ್ಮಿಕರಿಗೆ ಕಡ್ಡಾಯವಾಗಿ ವಾಕ್ಸಿನೇಷನ್, ಕುಡಿಯುವ ನೀರು, ಗ್ಲೌಸ್, ಮಾಸ್ಕ್ ಮತ್ತು ಪೊರಕೆಯನ್ನು ಪೂರೈಸಲು ಹಾಗೂ ಕಸ ಸಾಗಿಸುವ ಆಟೋಗಳಿಗೆ 8 ತಿಂಗಳಿನಿಂದ ಬಟವಾಡೆ ನೀಡಿರುವುದಿಲ್ಲವೆಂದು ಮತ್ತು ಈ ಕೂಡಲೇ ಆಟೋ ಗಾಡಿಗಳಿಗೆ ಬಟವಾಡೆ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಕೂಡಲೆ ತಿಳಿಸುವಂತೆ ಹಿರಿಯ ಆರೋಗ್ಯ ಪರೀವೀಕ್ಷಕರಿಗೆ/ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ಸಭೆಯಲ್ಲಿ ತಿಳಿಸಿರುತ್ತಾರೆ.

ಹಾಗೂ ತುಂಗಾನಗರ ಮುಖ್ಯ ರಸ್ತೆ, ಅರುಣೋದಯ ಸ್ಕೂಲ್ ಹತ್ತಿರ ಡಿ.ಎಸ್.ಮ್ಯಾಕ್ಸ್ ಹಾಗೂ ಬಿ.ಇ.ಎಲ್ ಬಡಾವಣೆ 1&2 ನೇ ಹಂತದ ವ್ಯಾಪ್ತಿಯಲ್ಲಿ ಕಸವು ಪಾಯಿಂಟ್ ಹರಡಿರುತ್ತದೆ ಎಂದು ಸೂಚಿಸಿರುತ್ತಾರೆ.

**<u>ಕಾಮಗಾರಿ ಇಲಾಖೆಗೆ:-</u>**

1) ಸ್ಥಳೀಯ ನಿವಾಸಿಗಳು ಸಭೆಯಲ್ಲಿ ಬಿ.ಇ.ಎಲ್ ಬಡಾವಣೆ 2ನೇ ಹಂತದ ಪ್ರದೇಶದಲ್ಲಿ ರಸ್ತೆಗೆ ಢಾಂಬರು ಹಾಕಲು ಮತ್ತು ಅದರಂತೆ ಡಾಂಬರು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ಬಡಾವಣೆಯ 12ನೇ ಅಡ್ಡರಸ್ತೆಯಲ್ಲಿ ಕವರಿಂಗ್ ಸ್ಲ್ಯಾಬ್‌ಗಳನ್ನು ಹಾಕಲು ಸಭೆಯಲ್ಲಿ ಸೂಚಿಸದರು. ಹಾಗೂ ದುರಸ್ಥಿಗೊಂಡಿರುವ ಬೋರ್‌ವೆಲ್‌ಗಳನ್ನು ದುರಸ್ಥಿ ಕಾರ್ಯ ಮಾಡಲು ಸಭೆಯಲ್ಲಿ ಸ್ಥಳೀಯ ನಿವಾಸಿಗಳು ಮತ್ತು ವಾಡ್ ಸಮಿತಿ ಸದಸ್ಯರು ಆದ ಶ್ರೀ ಮುತ್ತಪ್ಪರವರು ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ವಾರ್ಡ ಸಹಾಯಕ ಅಭಿಯಂತರರಾದ ಶ್ರೀ ಚಿತ್ತಯ್ಯನವರು ದುರಸ್ಥಿ ಕಾಮಗಾರಿಯನ್ನು ಹಂತಹಂತವಾಗಿ ನಿರ್ವಹಿಸಲು ಸಭೆಯಲ್ಲಿ ಸೂಚಿಸಿದರು.

**<u>ಬೆಸ್ಕಾಂ ಇಲಾಖೆ:-</u>**

1) ವಾರ್ಡ ಸಂಖ್ಯೆ : 72ರ ಪ್ರದೇಶದ ವ್ಯಾಪ್ತಿಯಲ್ಲಿ ಬರುವಂತ ಬಡಾವಣೆಗಳಲ್ಲಿ ಹೊಸದಾಗಿ ವಿದ್ಯುತ್ ತಂತಿಯನ್ನು ಹಾಕುತ್ತಿರುವುದರಿಂದ ವಾರ್ಡ್ ಪ್ರದೇಶದಲ್ಲಿನ ನಿವಾಸಿಗಳು ದೂರವಾಣಿ ಮೂಲಕ ದೂರಿನಲ್ಲಿ ಪದೇ ಪದೇ ವಿದ್ಯುತ್ ಕಡಿತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಬೆಸ್ಕಾಂ) ರವರು ಈ ರೀತಿ ವಿದ್ಯುತ್ ಕಡಿತಗೊಳಿಸುವ ಸಂಬಂಧ ಜನರಿಗೆ ತಿಳಿಸಿ ಕ್ರಮವಹಿಸಲು ತಿಳಿಸಿರುತ್ತಾರೆ.

**<u>ಕೆರೆ ಪ್ರಾಧಿಕಾರ ಬಿ.ಬಿ.ಎಂ.ಪಿ:-</u>**

ಕೆರೆ ಸಂಬಂಧಿತ ಅಧಿಕಾರಿಗಳು ವಾರ್ಡ ಕಮಿಟಿ ಸಭೆಗೆ ಗೈರು ಹಾಜಾರಾಗಿರುತ್ತಾರೆ.

**<u>ಅರಣ್ಯ ಇಲಾಖೆ ಬಿ.ಬಿ.ಎಂ.ಪಿ</u>**

ಅರಣ್ಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಕಮಿಟಿ ಸಭೆಗೆ ಗೈರು ಹಾಜರಾಗಿರುತ್ತಾರೆ.

**<u>ತೋಟಗಾರಿಕೆ ಇಲಾಖೆ:-</u>**

ಈ ಸಂಬಂಧ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ಈ ದಿನ ನಡೆದ ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುತ್ತಾರೆ. ಹಾಗೂ ವಾರ್ಡ್ ಸಮಿತಿ ಸದಸ್ಯರು ಆದ ಶ್ರೀ ನಿಖಿಲ್ ರವರು ವಾರ್ಡ್:72ರ ಹೆರೋಹಳ್ಳಿ ವ್ಯಾಪ್ತಿಗೆ ಸಂಬಂಧಿಸಿದ ಉದ್ಯಾನವನಗಳಲ್ಲಿ ನೀರಿನ ವ್ಯವಸ್ಥೆಗಳಿಲ್ಲದೆ ಗಿಡಗಳು ಮತ್ತು ಮರಗಳು ಹಾಳಾಗುತ್ತಿವೆ ಎಂದು ಸಭೆಯಲ್ಲಿ

ತಿಳಿಸಿದ್ದರಿಂದ ನೋಡಲ್ ಅಧಿಕಾರಿಗಳು ಈ ಬಗ್ಗೆ ಸಂಬಂಧಪಟ್ಟವರಿಗೆ ಅಗತ್ಯ ಕ್ರಮವಹಿಸಲು ವಾರ್ಡ್ ಕಮಿಟಿ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿರುತ್ತಾರೆ.

**ಪಶುಪಾಲನೆ ಇಲಾಖೆ ಬಿ.ಬಿ.ಎಂ.ಪಿ:-**

ಪಶುಪಾಲನೆ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುತ್ತಾರೆ.

**ವಂದಾನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.**

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 72. ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ 72 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.